**ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 16-04-2025.**

**ಪಾಟೀ ಸವಾಲುಃ 14 ರಿಂದ 23 ನೇ ಪ್ರತಿವಾದಿಯರ ಪರ ಶ್ರೀ ಎಸ್. ಎಸ್. ಬಿ. ವಕೀಲರಿಂದಃ**

ಈ ದಾವೆ ಸಲ್ಲಿಸಿದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸರಿ. ನಾನು ಹಾಜರು ಪಡಿಸಿದ ಕಾಗದ ಪತ್ರಗಳ ಬಗ್ಗೆಯೂ ನನಗೆ ತಿಳಿದಿದೆ ಎಂದರೆ ಸರಿ. ಈ ದಾವೆಯಲ್ಲಿ 14 ರಿಂದ 23 ನೇ ಪ್ರತಿವದಿಯರು ಸಲ್ಲಿಸಿದ ಉದಾಹರಣೆಯನ್ನು ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಅದೇ ರೀತಿ 14 ರಿಂದ 23 ನೇ ಪ್ರತಿವಾದಿಯರು ಹಾಜರು ಪಡಿಸಿದ ಕಾಗದ ಪತ್ರಗಳ ಬಗ್ಗೆಯೂ ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ದಾವಾ ಅನುಸೂಚಿ ಅ ನೇದರಲ್ಲಿ ಕಾಣಿಸಿದ ವಂಶಾವಳಿಗೂ ಮತ್ತು 14 ರಿಂದ 23 ನೇ ಪ್ರತಿವಾದಿಯರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಅವರು ನಮ್ಮ ವಂಶದವರಲ್ಲ. ಈ ದಾವೆಯನ್ನು ದಾಖಲು ಮಾಡುವ ಕಾಲಕ್ಕೆ ನಾನು ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿರುತ್ತೇನೆ. ನಿಪಿ.1 ರಲ್ಲಿ 21 ನೇ ಪ್ರತಿವಾದಿಯ ಮತ್ತು ರುದ್ರಪ್ಪ ಈರಪ್ಪ ಕೊಂಡ್ಲಿಕೊಪ್ಪ ಇವರ ಹೆಸರು ಇದೆ ಎಂದರೆ, ಅವರು ನಮಗೆ ಗೊತ್ತಿಲ್ಲದ ಹಾಗೇ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಮಗೆ ಗೊತ್ತಿಲ್ಲದ ಹಾಗೆ ಅವರು ತಮ್ಮ ಹೆಸರನ್ನು ಮಾಡಿಕೊಂಡಿರುತ್ತಾರೆ ಎಂದು ಹೇಳಿದ್ದು, ಸದರಿಯವರು ಸುಮಾರು ಎಷ್ಟು ವರ್ಷಗಳ ಹಿಂದೆ ತಮ್ಮ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದು ಹೇಳಬಹುದೇ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅಜ್ಜ ಮತ್ತು ಅಮ್ಮನಿಗೆ ದಾವಾ ಆಸ್ತಿ ಹೇಗೆ ಬಂದಿರುತ್ತದೆ ಎಂದರೆ, ಅವರು ಖರೀದಿ ಮಾಡಿದ ಹೊಲಗಳೆಂದು ನುಡಿಯುತ್ತಾರೆ. ಸದರಿಯವರು ಎಷ್ಟನೇ ಇಸ್ವಿಯಲ್ಲಿ ದಾವಾ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆಂದು ಹೇಳಬಹುದೇ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯನ್ನು ಹೂಡುವ ಕಾಲಕ್ಕೆ ನಮ್ಮ ಅಜ್ಜ ಮತ್ತು ಅಮ್ಮನವರು ದಾವಾ ಆಸ್ತಿಗಳನ್ನು ಖರೀದಿ ಮಾಡಿದ ಬಗ್ಗೆ ಖರೀದಿ ಪತ್ರಗಳನ್ನೇನೇದಾರೂ ಹಾಜರು ಪಡಿಸಿದ್ದಿರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಅಜ್ಜ ಮತ್ತು ಅಮ್ಮನವರು ಸುಮಾರು 80 ರಿಂದ 90 ವರ್ಷಗಳ ಹಿಂದೆ ದಾವಾ ಆಸ್ತಿಗಳನ್ನು ಖರೀದಿ ಮಾಡಿರಬಹುದು. ಸಿದ್ದಪ್ಪ ಯಲ್ಲಪ್ಪ ವಡ್ಡರ ಯಾರು ಎಂದು ನನಗೆ ತಿಳಿದಿದೆ. ನಿ.ಪಿ.4 ರಲ್ಲಿ ಸದರಿ ಸಿದ್ದಪ್ಪ ಯಲ್ಲಪ್ಪ ವಡ್ಡರ ಓರ್ವ ಈರಣ್ಣ ಗೌಡ ಚೆನ್ನವೀರಗೌಡ ಬಾಚಣಕಿ ಎನ್ನುವವರಿಂದ ದಿಃ 16-10-1949 ರಂದು ತೋಂಡಿ ಖರೀದಿ ಮಾಡಿದ್ದರು ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ಸದರಿ ಈರಣ್ಣ ಗೌಡ ಚೆನ್ನವೀರಗೌಡ ಬಾಚಣಕಿ ಇವರು ನಮ್ಮ ವಂಶಸ್ಥರು ಅಲ್ಲ ಎಂದರೆ ಸರಿ. ನಾನು ಈ ದಾವೆಯಲ್ಲಿ ಡ ಶೇಜ್ ನಂಬರ್ 933 (ನಿಪಿ.6) ನೇದನ್ನು ಹಾಜರು ಪಡಿಸಿದ್ದೇನೆ ಎಂದರೆ ಸರಿ. ಸಿದ್ದಪ್ಪರವರು ಖರೀದಿ ಮಾಡಿದ್ದನ್ನು ದಿಃ 16-02-1957 ರಂದು ಕಬ್ಜಾ ಇಲ್ಲದೇ ಇರುವುದರಿಂದ ಆ ಖರೀದಿಯನ್ನು ರದ್ದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿಯದನ್ನು ನಾನಾಗಲೀ

ಸಿದ್ದಪ್ಪರವರಾಗಲೀ, ಅವರ ವಾರಸುದಾರರಾಗಲೀ ಸಕ್ಷಮ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ, ಈಗ ನಮಗೆ ತಿಳಿದುಬಂದ ನಂತರ ದಾವೆಯನ್ನು ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

14 ರಿಂದ 23 ನೇ ಪ್ರತಿವಾದಿಯರ ಮೂಲಪುರುಷರಾದ ಚನ್ನಬಸಪ್ಪ ಈರಪ್ಪ ಕೊಂಡ್ಲಿಕೊಪ್ಪ ಇವರು ಅಂದಾನಿಗೌಡ ಈರನ ಗೌಡ ಪಾಟೀಲ ಇವರಿಂದ ದಿಃ 20-11-1965 ರಂದು ದಾವಾ ಆಸ್ತಿಗಳನ್ನು ನೋಂದಾಯಿತ ಖರೀದಿ ಮಾಡಿಕೊಂಡಿರುತ್ತಾರೆ ಎಂದರೆ, ಸಾಕ್ಷಿಯು ನಮ್ಮ ಮಾವನವರು ಹೊಲಗಳನ್ನು ಲಾವಣಿಗೆ ಬಿಟ್ಟಿದ್ದೇವೆ, ನಿಮ್ಮ ನಿಮ್ಮ ಮಕ್ಕಳು ದೊಡ್ಡವರಾದ ನಂತರ ನಿಮಗೆ ಮಾಡಿಕೊಳ್ಳಿ, ನಾನು ಖರೀದಿಗೆ ಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ. ಅದಕ್ಕೆ ಯಾವುದೇ ದಾಖಲೆಗಳು ಇಲ್ಲ ಎಂದರೆ ನಮ್ಮ ವಕೀಲರ ಬಳಿ ಇರಬಹುದೆಂದು ನುಡಿಯುತ್ತಾರೆ. ಅವರು ಖರೀದಿ ಮಾಡಿದ ದಿನದಿಂದ 14 ರಿಂದ 23 ನೇ ಪ್ರತಿವಾದಿಯರು ದಾವಾ ಆಸ್ತಿಗಳನ್ನು ಸ್ವತಂತ್ರ ಕಬ್ಜೆ ಹೊಂದಿ ಆಳಿ ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ, ನಾವು ಖರೀದಿಗೆ ಸಹಿ ಮಾಡಿ ರುವುದಿಲ್ಲ ಎಂದು ನುಡಿಯುತ್ತಾರೆ. ಆ ಕಾರಣ ವಾದಿಯರಿಗಾಗಲೀ ಮತ್ತು 1 ರಿಂದ 13 ನೇ ಪ್ರತಿವಾದಿಯರಿಗಾಗಲೀ ದಾವಾ ಆಸಿತಗಳ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ , ಸಾಕ್ಷಿಯು ನಾವು ಸಹಿ ಕೊಟ್ಟಿದ್ದರೆ ಹಕ್ಕು ಇರುತ್ತಿರಲಿಲ್ಲ ಆದರೆ ನಾವು ಸಹಿ ಕೊಟ್ಟಿರುವುದೇ ಇಲ್ಲ ಎಂದು ನುಡಿಯುತ್ತಾರೆ. ಅಂದಾನವಪ್ಪ ರವರು ದಾವಾ ಆಸ್ತಿಗಳನ್ನು ಚನ್ನಬಸಪ್ಪ ರವರಿಗೆ ಖರೀದಿ ಕೊಟ್ಟದ್ದನ್ನು ಪ್ರಶ್ನಿಸಿರುತ್ತಿರಾ ಎಂದರೆ ಇಲ್ಲ. ಖರೀದಿಯ ದಿನದಿಂದ ಸುಮಾರು 54 ವರ್ಷಗಳು ಕಳೆದ ಕಾರಣ ಈ ದಾವೆಯನ್ನು ದಾಖಲಿಸಲು ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿಯು ಖರೀದಿಯ ಬಗ್ಗೆ ನಮಗೆ ತಿಳಿದಿರುವುದಿಲ್ಲ, ತಿಳಿದುಬಂದ ನಂತರ ದಾವೆಯನ್ನು ದಾಖಲಿಸಿರುತ್ತೇವೆ ಎಂದು ನುಡಿದಿರುತ್ತಾರೆ. 14 ರಿಂದ 23 ನೇ ಪ್ರತಿವಾದಿಯರ ಮೂಲಪುರುಷ ದಾವಾ ಆಸ್ತಿಗಳನ್ನು ಖರೀದಿ ಮಾಡಿದ ದಿನದಿಂದ ಸರಕಾರಕ್ಕೆ ಸತತವಾಗಿ ತಿರುವೆಯನ್ನು ತುಂಬುತ್ತಾ ಬಂದಿದ್ದು ಸಾಲವನ್ನೂ ಪಡೆದುಕೊಂಡು ದಾವಾ ಆಸ್ತಿಗಳನ್ನು ಅಭಿವೃದ್ದಿ ಪಡಿಸಿರುತ್ತಾರೆ ಎಂದರೆ, ಸಾಕ್ಷಿಯು ಅವರು ನಮಗೆ ಸಾಲ ಮಾಡಿದ್ದನ್ನೂ ಹೇಳಿರುವುದಿಲ್ಲ, ತಿರುವೆ ತುಂಬುತ್ತಿರುವುದನ್ನೂ ಹೇಳಿರುವುದಿಲ್ಲ, ನಾವು ಬಿಟ್ಟು ಕೊಡಲು ಹೇಳಿದಾಗ ಬಿಟ್ಟುಕೊಡುತ್ತೆವೆ ಎಂದು ಹೇಳಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಬಗ್ಗೆ ಯಾವುದೇ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ 14 ರಿಂದ 23 ನೇ ಪ್ರತಿವಾದಿಯರ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

**ಸಿವಿಲ್ ಜಡ್ಜ, ಮುಂಡಗೋಡ.**